ದಿನಾಂಕ:16/12/2017 ರಂದು ಸೋಮವಾರ ಬೆಳಿಗ್ಗೆ 11:00 ಗಂಟೆಗೆ ನಾಗಮಂಗಲ ತಾಲ್ಲೂಕಿನ ನಾಗಮಂಗಲ ಉಪ ವಿಭಾಗ ಕಛೇರಿ ಆವರಣದಲ್ಲಿ ನಡೆದ ಜನಸಂಪರ್ಕ ಸಭೆಯ ನಡಾವಳಿಗಳು.

<u>ಹಾಜರಿದ್ದ ಅಧಿಕಾರಿಗಳು / ನೌಕರರು.</u>

ಶ್ರೀ/ಶ್ರೀಮತಿ/ಕುಮಾರಿ:

1) ಇ.ರವಿಶಂಕರ್ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಮಂಡ್ಯ ವೃತ್ತ.

2) ನಾರಾಯಣ ಕಳ್ಳಿಮನಿ : ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ವಿಭಾಗ

3) ಜಗದೀಶ್ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ಉಪವಿಭಾಗ

4) ಜಿ. ರಾಮಚಂದ್ರ : ಲೆಕ್ಕಾಧಿಕಾರಿ, ನಾಗಮಂಗಲ ವಿಭಾಗ

5) ಜಿ.ಶ್ರೀನಿವಾಸಲುನಾಯ್ಡು : ಸಹಾಯಕ ಇಂಜಿನಿಯರ್(ತಾಂ), ನಾಗಮಂಗಲ ವಿಭಾಗ

6) ಎನ್.ಜಿ.ಹರೀಶ್ : ಸಹಾಯಕ ಇಂಜಿನಿಯರ್(ತಾಂ), ನಾಗಮಂಗಲ ಉಪವಿಭಾಗ

7) ಡಿ.ನಟರಾಜು : ಪ್ರಭಾರ ಸಹಾಯಕ ಇಂಜಿನಿಯರ್(ವಿ), ನಾಗಮಂಗಲ ಶಾಖೆ

8) ಬೀರಪ್ಪ : ಕಿರಿಯ ಇಂಜಿನಿಯರ್(ವಿ), ದೇವಲಾಪುರ ಶಾಖೆ

7) ನವೀನ್ : ಪ್ರಭಾರ ಕಿರಿಯ ಇಂಜಿನಿಯರ್(ವಿ), ಚೀಣ್ಯ ಶಾಖೆ

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾ ಮತ್ತು ಪಾ ಉಪವಿಭಾಗ ನಾಗಮಂಗಲ ರವರು ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ ನೌಕರರನ್ನು ಹಾಗೂ ವಿದ್ಯುತ್ ಗ್ರಾಹಕರನ್ನು ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ನಡೆಸುವಂತೆ ಕೆ.ಇ.ಆರ್.ಸಿ ರವರಿಂದ ಆದೇಶವಾಗಿರುತ್ತದೆ. ವಿದ್ಯುತ್ ದರವನ್ನು ಪರಿಷ್ಕರಿಸುವ ಸಂದರ್ಭದಲ್ಲಿ ವಿದ್ಯುತ್ ಬಳಕೆದಾರರ ಒಪ್ಪಿಗೆಯ ಅವಶ್ಯಕತೆ ಇರುತ್ತದೆ. ಶಾಖಾಧಿಕಾರಿಗಳು ವಿದ್ಯುತ್ ಬಳಕೆದಾರರ ಸಮಸ್ಯೆಗಳಿಗೆ ಸ್ಪಂದಿಸುವ ಕುರಿತು ಹಾಗೂ ಗ್ರಾಹಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್ ಕಾರ್ಯ ಮತ್ತು ಪಾಲನಾ ವೃತ್ತ, ಮಂಡ್ಯ ರವರು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ / ಲಿಖಿತವಾಗಿ ಸಲ್ಲಿಸುವಂತೆ ವಿದ್ಯುತ್ ಗ್ರಾಹಕರಲ್ಲಿ / ಸಾರ್ವಜನಿಕರಲ್ಲಿ ಕೇಳಲಾಯಿತು.

ಈ ಹಿಂದಿನ ಸಭೆಗಳಲ್ಲಿ ಚರ್ಚಿಸಲಾದ/ ನೀಡಲಾದ ದೂರು ಅಥವಾ ಸಮಸ್ಯೆಗಳ ಬಗ್ಗೆ ಹಾಗೂ ಅವುಗಳನ್ನು ಬಗೆಹರಿಸಲು ಕೈಗೊಂಡ ಕ್ರಮದ ಬಗ್ಗೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ ರವರೊಂದಿಗೆ ಚರ್ಚಿಸಿ ಪರಿಶೀಲಿಸಿದರು.

**1)ನಂಜುಂಡಸ್ವಾಮಿ ಪಿ.ಎಸ್ ಪಾಲಗ್ರಹಾರ ಮೊಬೈಲ್ ನಂ:-9481302064**

ದೂರು:- ತಮ್ಮ ಗ್ರಾಮದ ಪರಿಶಿಷ್ಟ ಕಾಲೋನಿಗೆ ಪ್ರತ್ಯೇಕ ಪರಿವರ್ತಕ ಅಳವಡಿಸಲು ಕೋರಿರುತ್ತಾರೆ.

ಕ್ರಮ:- ಕಾರ್ಯನಿರ್ವಾಹಕ ಇಂಜಿನಿಯರ್(ವಿ) ನಾಗಮಂಗಲ ರವರು ಸದರಿ ಗ್ರಾಮದ 63 ಕೆವಿಎ ಸಾಮರ್ಥ್ಯದ ಪರಿವರ್ತಕವನ್ನು ಬದಲಾಯಿಸಿ ಹೆಚ್ಚಿನ ಸಾಮರ್ಥ್ಯದ 100ಕೆವಿಎ ಪರಿವರ್ತಕವನ್ನು ಅಳವಡಿಸಲಾಗಿದೆ, ಕುಡಿಯುವ ನೀರು ಸ್ಥಾವರಕ್ಕೆ ಪ್ರತ್ಯೇಕ 25 ಕೆವಿಎ ಪರಿವರ್ತಕ ಅಳವಡಿಸಲು DDUGJY ಅಡಿಯಲ್ಲಿ ಅಂದಾಜುಪಟ್ಟಿ ತಯಾರಿಸಿದ್ದು ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಹಾಗೂ ಪರಿಶಿಷ್ಟ ಕಾಲೋನಿಗೆ ಪ್ರತ್ಯೇಕ 25 ಕೆವಿಎ ಪರಿವರ್ತಕ ಅಳವಡಿಸಲು SCP ಯೋಜನೆಯಲ್ಲಿ ಮಂಜೂರು ಮಾಡಲಾಗಿದ್ದು ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದು ತಿಳಿಸಿದರು.

**2)ಕೃಷ್ಣಪ್ಪ ಮಜ್ಜನಕೊಪ್ಪಲು ಮೊಬೈಲ್ ನಂ:- 8105295166**

ದೂರು:- ತಮ್ಮ ಗ್ರಾಮದ ಐಪಿ ವ್ಯಾಪ್ತಿಯ 63 ಕೆವಿಎ ಪರಿವರ್ತಕದ ಮೇಲೆ 13 ಐಪಿ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದು, ಅಕ್ರಮ ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿದರು.

ಕ್ರಮ:- ಸ್ಥಳ ಪರಿಶೀಲನೆ ನಡೆಸಿ ನಿಗಮದ ನಿಯಮಾನುಸಾರ ಅಗತ್ಯ ಕ್ರಮವಹಿಸುವಂತೆ ಶಾಖಾಧಿಕಾರಿ ನಾಗಮಂಗಲ ರವರಿಗೆ ಸೂಚಿಸಿದರು.

3) **ಹೆಚ್.ಎನ್.ಗೋಪಾಲಕೃಷ್ಣ ಅರಳಕೆರೆ ಮೊಬೈಲ್ ನಂ:-8277096765**

ದೂರು:- ತಮ್ಮ ಗ್ರಾಮದ ಐಪಿ ವ್ಯಾಪ್ತಿಯ 100 ಕೆವಿಎ ಪರಿವರ್ತಕದ ಎಲ್.ಟಿ ಮಾರ್ಗವು 1 ಕಿ.ಮೀ ಗಿಂತ ಹೆಚ್ಚಿದ್ದು, ವೋಲ್ಟೇಜ್ ಸಮಸ್ಯೆ ಇರುವ ಕಾರಣ ಹಾಗೂ ತಾವು 2013 ರಲ್ಲಿ ಅಕ್ರಮ ಸಕ್ರಮ ಯೋಜನೆಯಡಿ ಹಣ ಪಾವತಿಸಿರುವ ಕಾರಣ ಹೆಚ್ಚುವರಿ ಪರಿವರ್ತಕ ಅಳವಡಿಸಿಕೊಡುವಂತೆ ಕೋರಿದರು.

ಕ್ರಮ:- ಸ್ಥಳ ಪರಿಶೀಲನೆ ನಡೆಸಿ ಅಂದಾಜುಪಟ್ಟಿ ಸಲ್ಲಿಸುವಂತೆ ಶಾಖಾಧಿಕಾರಿ ದೇವಲಾಪುರ ರವರಿಗೆ ಸೂಚಿಸಿದರು. ಇದೇ ರೀತಿ ಸಕ್ರಮಗೊಳ್ಳದ ಐಪಿ ಸ್ಥಾವರಗಳನ್ನು ರೈತರ ಮನವೊಲಿಸಿ ಸಕ್ರಮೀಕರಿಸಿಕೊಳ್ಳಲು ಕ್ರಮ ವಹಿಸುವಂತೆ ಸೂಚಿಸಿದರು.

4) **ತಮ್ಮಣ್ಣ ಗೌಡ ನಾಗಮಂಗಲ ಮೊಬೈಲ್ ನಂ:-9141734225**

ದೂರು:- (1) ಬೆಳ್ಳೂರು ಶಾಖೆಯಲ್ಲಿ ಶಾಖಾಧಿಕಾರಿಗಳನ್ನು ಆರು ತಿಂಗಳಿಗೊಮ್ಮೆ ವರ್ಗಾವಣೆ ಮಾಡುತ್ತಿದ್ದು ಗ್ರಾಹಕರಿಗೆ ತೊಂದರೆಯಾಗುತ್ತಿದೆ ಎಂದು ದೂರಿದರು.

ಕ್ರಮ:- ಆಡಳಿತಾತ್ಮಕ ದೃಷ್ಟಿಯಿಂದ ಅಧಿಕಾರಿಗಳ ವರ್ಗಾವಣೆ ಅವಶ್ಯಕವಾಗಿದ್ದು, ಬೆಳ್ಳೂರು ಶಾಖೆಗೆ ಶಾಖಾಧಿಕಾರಿಗಳನ್ನು ನಿಯೋಜಿಸಲು ಕ್ರಮ ವಹಿಸುವುದಾಗಿ ತಿಳಿಸಿದರು.

ದೂರು:- (2) ಶಾಶ್ವತ ನಿಲುಗಡೆಗೊಂಡಿರುವ ಸ್ಥಾವರಗಳ ಠೇವಣಿ ಹಣವನ್ನು ಗ್ರಾಹಕರಿಗೆ ಹಿಂತಿರುಗಿಸಿರುವುದಿಲ್ಲ. ಇದನ್ನು ಹಿಂತಿರುಗಿಸುವಂತೆ ಕೋರಿದರು.

ಕ್ರಮ:- ಲೆಕ್ಕಾಧಿಕಾರಿ, ನಾಗಮಂಗಲ ರವರು ಸದರಿ ಸ್ಥಾವರಗಳ ಪ್ರಸ್ತಾವನೆಯನ್ನು ಪೂರ್ಣಗೊಳಿಸಿದ್ದು, Funds ಗಾಗಿ ನಿಗಮ ಕಛೇರಿಗೆ ಸಲ್ಲಿಸಿರುವುದಾಗಿ & ನಿಗಮ ಕಛೇರಿಯಿಂದ ಅನುಮೋದನೆ ದೊರೆತ ಕೂಡಲೇ ಹಣವನ್ನು ಹಿಂತಿರುಗಿಸಲಾಗುವುದು ಎಂದು ತಿಳಿಸಿದರು.

ದೂರು:- (3) ಗಿಡುವಿನ ಹೊಸಹಳ್ಳಿ ಗ್ರಾಮದ ಐಪಿ ಸ್ಥಾವರಗಳಿಗೆ 2006 ರಲ್ಲಿ ಹಣ ಪಾವತಿ ಮಾಡಿದ್ದು ಇದುವರೆಗೆ ಆರ್.ಆರ್.ಸಂಖ್ಯೆ ನೀಡಿರುವುದಿಲ್ಲ ಎಂದು ತಿಳಿಸಿದರು.

ಕ್ರಮ:- ಹಿರಿಯ ಸಹಾಯಕರು ನಾಗಮಂಗಲ ಉಪವಿಭಾಗ ರವರನ್ನು ವಿಚಾರಿಸಲಾಗಿ ಕಡತಗಳು ಲಭ್ಯವಿರುವುದಿಲ್ಲಿ ಎಂದು ತಿಳಿಸಿದರು ಅರ್ಜಿದಾರರಿಂದ ದಾಖಲೆಗಳನ್ನು ತೆಗೆದುಕೊಂಡು ನಕಲಿ ಕಡತ (Duplicate file) ತಯಾರಿಸಿ ಆರ್.ಆರ್.ಸಂಖ್ಯೆ ವಿತರಿಸಲು ಕ್ರಮ ವಹಿಸುವಂತೆ ಸೂಚಿಸಿದರು.

ದೂರು:- (4) ಜನಸಂಪರ್ಕ ಸಭೆಯ ಬಗ್ಗೆ ಸೂಕ್ತ ಮಾಹಿತಿ & ಪ್ರಚಾರ ಇರುವುದಿಲ್ಲ ಎಂದು ದೂರಿದರು.

ಕ್ರಮ:- ವೃತ್ತ ಪತ್ರಿಕೆಗಳಲ್ಲಿ ಸಭೆಯ ಬಗ್ಗೆ ಮಾಹಿತಿ ನೀಡಿರುವುದಾಗಿ ತಿಳಿಸಿದರು & ಅದನ್ನು ದೂರುದಾರರ ಗಮನಕ್ಕೆ ತಂದರು, ಎಲ್ಲಾ ಗ್ರಾಮ ಪಂಚಾಯಿತಿಗಳಿಗೆ ಕರಪತ್ರ ಹಂಚಿದ್ದು, ನಿಗಮದ ಕಛೇರಿಗಳ ಬಳಿ ಸಹ ಕರಪತ್ರ ಅಂಟಿಸಿರುವುದನ್ನು ಸೂಚಿಸಿದರು. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಪ್ರಚಾರ ನೀಡುವುದಾಗಿ ತಿಳಿಸಿದರು.

ದೂರು:- (5) ಕೆ.ಮಲ್ಲೇನಹಳ್ಳಿ ಗ್ರಾಮದಲ್ಲಿ ಎಲ್ಲಾ ದಾಖಲಾತಿಗಳನ್ನು ಒದಗಿಸಿ ಹಣ ಪಾವತಿ ಮಾಡಿದ್ದರೂ ಮತ್ತೊಮ್ಮೆ ಸಾರ್ವಜನಿಕರು ಸದರಿ ಜಮೀನಿನ ಮಾಲಿಕತ್ವದ ಆರ್.ಟಿ.ಸಿ ತಮ್ಮ ಹೆಸರಿನಲ್ಲಿ ಇರುವುದಾಗಿ ತಿಳಿಸಿ ಆಕ್ಷೇಪಣೆ ವ್ಯಕ್ತಪಡಿಸಿದ ಕಾರಣ ವಿದ್ಯುತ್ ಸಂಪರ್ಕ ನೀಡಿರುವುದಿಲ್ಲಿ.

ಕ್ರಮ:- ಈ ಬಗ್ಗೆ ದಾಖಲೆಗಳನ್ನು ಒದಗಿಸಿ ಸದರಿ ಜಮೀನಿನ ಮಾಲಿಕತ್ವದ ಬಗ್ಗೆ ಧೃಡೀಕರಣ ನೀಡುವಂತೆ ಕೋರಿ ತಹಸೀಲ್ದಾರರಿಗೆ ಪತ್ರ ಬರೆಯುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. ನಂತರ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳುವುದಾಗಿ ಸೂಚಿಸಿದರು.

ದೂರು:- (6) ತಮ್ಮ ಗ್ರಾಮದ ಐಪಿ ವ್ಯಾಪ್ತಿಯ 63 ಕೆವಿಎ ಪರಿವರ್ತಕದ ಮೇಲೆ 13 ಐಪಿ ಸ್ಥಾವರಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸಿದ್ದು, ಅಕ್ರಮ ಸಕ್ರಮ ಯೋಜನೆಯಡಿ ಹಣ ಪಾವತಿಸಿದ್ದು ಹೆಚ್ಚುವರಿ ಪರಿವರ್ತಕವನ್ನು ಅಳವಡಿಸಿಕೊಡುವಂತೆ ಕೋರಿದರು.

ಕ್ರಮ:- ಸ್ಥಳ ಪರಿಶೀಲನೆ ನಡೆಸಿ ನಿಗಮದ ನಿಯಮಾನುಸಾರ ಅಗತ್ಯ ಕ್ರಮವಹಿಸುವಂತೆ ಶಾಖಾಧಿಕಾರಿ ನಾಗಮಂಗಲ ರವರಿಗೆ ಸೂಚಿಸಿದರು.

**5) ದೊಡ್ಡೇಗೌಡ ಮಜ್ಜನಕೊಪ್ಪಲು ಮೊಬೈಲ್ ನಂ:- 7760572668**

ದೂರು:- ತಾತ್ಕಾಲಿಕ ವಿದ್ಯುತ್ ಸಂಪರ್ಕವನ್ನು ಒಂದು/ಎರಡು ದಿನದ ಮಟ್ಟಿಗೆ ಪಡೆಯುವಾಗ ಸಹ ವಿದ್ಯುತ್ ಮಾಪಕವನ್ನು ಮಂಡ್ಯ ನಗರದ ಮಾಪಕ ಖರೀದಿ ಕೇಂದ್ರದಿಂದ ಖರೀದಿಸಬೇಕಾಗಿದ್ದು, ಶೀಘ್ರವಾಗಿ ವಿದ್ಯುತ್ ಸಂಪರ್ಕ ಪಡೆಯಲು ಸಾಧ್ಯವಾಗುತ್ತಿಲ್ಲ. ಆದ್ದರಿಂದ ತಾತ್ಕಾಲಿಕ ಸ್ಥಾವರಗಳಿಗೆ ನಿಗಮದ ವತಿಯಂದ ಮಾಪಕ ಅಳವಡಿಸುವಂತೆ ಕೋರಿದರು.

ಕ್ರಮ:- ನಾಗಮಂಗಲ ಪಟ್ಟಣದಲ್ಲಿ ಮಾಪಕ ಖರೀದಿ ಕೇಂದ್ರ ತೆರೆಯಲು ಮೇಲಾಧಿಕಾರಿಗಳೊಂದಿಗೆ ಚರ್ಚಿಸಿ, ಕ್ರಮ ವಹಿಸುವುದಾಗಿ ತಿಳಿಸಿದರು. ನಿಗಮದ ನಿಯಮಾವಳಿಗಳನ್ನು ಅನುಸರಿಸಿ, ನಿಗಮದ ವತಿಯಿಂದ ಮಾಪಕ ಅಳವಡಿಸಲು ಕ್ರಮ ವಹಿಸುವಂತೆ ಉಪ ವಿಭಾಗಾಧಿಕಾರಿಗಳಿಗೆ ಸೂಚಿಸಿದರು.

**6) ವೆಂಕಟೇಶ ದೇವರಮಾದಿಹಳ್ಳಿ ಮೊಬೈಲ್ ನಂ:- 7996403946**

ದೂರು:- ತಾವು ರಾಗಿ ಕ್ಲೀನಿಂಗ್ ಮಿಲ್‌ಗೆ ಅರ್ಜಿ ಸಲ್ಲಿಸಿದ್ದು ಕಾರ್ಯಾದೇಶ ಮಂಜೂರಾಗಿದ್ದು, ಕಾಮಗಾರಿ ನಿರ್ವಹಿಸಲು ಉಗ್ರಾಣದಿಂದ ಸಾಮಗ್ರಿಗಳನ್ನು ಒದಗಿಸುವಂತೆ ಕೋರಿದರು.

ಕ್ರಮ:- ಕಾರ್ಯನಿರ್ವಾಹಕ ಇಂಜಿನಿಯರ್(ವಿ) ನಾಗಮಂಗಲ ರವರು ಮಾತನಾಡಿ ಸದರಿ ಕಾಮಗಾರಿ ನಿರ್ವಹಿಸಲು ಲೇಬರ್ ಅವಾರ್ಡ್ ನೀಡಲಾಗಿದೆ. ಸಾಮಗ್ರಿಗಳನ್ನು ಪಡೆಯಲು ಗುತ್ತಿಗೆದಾರರಿಗೆ ಇಂಡೆಂಟ್ ಸಹನೀಡಲಾಗಿದೆ ಉಗ್ರಾಣದಲ್ಲಿ ಲಭ್ಯವಿರುವ ಸಾಮಗ್ರಿಗಳನ್ನು ಪಡೆದು ಉಳಿದ ಸಾಮಗ್ರಿಗಳಿಗೆ ನಿಯಮಾನುಸಾರ ಬಿಲ್ ಪಡೆದು ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಿದರು.

**7) ರವಿಗೌಡ ಶೆಟ್ಟಿಹಳ್ಳಿ ಮೊಬೈಲ್ ನಂ:-9482442268**

ದೂರು:- ಬಂಕಾಪುರ, ಗೊಲ್ಲರಹಳ್ಳಿ ಗ್ರಾಮದಲ್ಲಿ 8 ಮನೆಗಳಿಗೆ ವಿದ್ಯುತ್ ಸಂಪರ್ಕ ಇರುವುದಿಲ್ಲ. ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ವಹಿಸುವಂತೆ ಕೋರಿದರು.

ಕ್ರಮ:- ಸೌಭಾಗ್ಯ ಯೋಜನೆ ಅಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಅನುಮೋದನೆಗಾಗಿ ಸಲ್ಲಿಸಲಾಗಿದೆ ಎಂದು ತಿಳಿಸಿದರು.

**8) ಬೆಟ್ಟಸ್ವಾಮಿ, ಜಿ ಮೊಮ್ಮನಹಳ್ಳಿ ಮೊಬೈಲ್ ನಂ:-9900724745**

ದೂರು:- ಅಕ್ರಮ ಸಕ್ರಮ ಯೋಜನೆಯಡಿಯಲ್ಲಿ 2011 ನೇ ಇಸವಿಯಲ್ಲಿ ಹಣ ಪಾವತಿಸಿದ್ದು, ಇದುವರೆಗೆ ಮೂಲಭೂತ ಸೌಕರ್ಯ ಕಲ್ಪಿಸಿರುವುದಿಲ್ಲ ಎಂದು ತಿಳಿಸಿದರು.

ಕ್ರಮ:- ಅರ್ಜಿದಾರರಿಂದ ರಸೀದಿ/ಆರ್.ಆರ್.ಸಂಖ್ಯೆ ಪಡೆದು ಸ್ಥಳ ಪರಿಶೀಲನೆ ನಡೆಸಿ ನಿಯಮಾನುಸಾರ ಕ್ರಮ ವಹಿಸುವಂತೆ ಸೂಚಿಸಿದರು.

ಮೇಲ್ಕಂಡ ದೂರುಗಳಿಗೆ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಮುಂದಿನ ಜನಸಂಪರ್ಕ ಸಭೆಯಲ್ಲಿ ಹಾಜರುಪಡಿಸುವಂತೆ ಉಪವಿಭಾಗಾಧಿಕಾರಿಗಳಿಗೆ ಸೂಚಿಸಲಾಯಿತು.

ಲೆಕ್ಕಾಧಿಕಾರಿ, ನಾಗಮಂಗಲ ವಿಭಾಗರವರು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳು/ನೌಕರರು ಹಾಗೂ ಗ್ರಾಹಕರುಗಳಿಗೆ ವಂದನಾರ್ಪಣೆ ಸಲ್ಲಿಸಿದ ನಂತರ ಸಭೆಯನ್ನು ಮಧ್ಯಾಹ್ನ 01:30 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ದೂರನ್ನು ನೀಡಿದ ಗ್ರಾಹಕರ ಸಂಖ್ಯೆ-8

ಒಟ್ಟು ದೂರು/ಸಮಸ್ಯೆಗಳು- 12

ಮೆಮೊ ಸಂಖ್ಯೆ:ಕಾನಿಇಂ(ವಿ)/ಸಇಂ(ತಾ)/ನಾ/17-18/

ದಿನಾಂಕ:

ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ವಿಭಾಗ,
ನಾಗಮಂಗಲ.

ಪ್ರತಿಯನ್ನು ಇವರ ದಯಾಪರ ಅವಗಾಹನೆಗಾಗಿ ಸಲ್ಲಿಸಲಾಗಿದೆ.

1. ಮುಖ್ಯ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಲಯ ಮೈಸೂರು.
2. ಪ್ರಧಾನ ವ್ಯವಸ್ಥಾಪಕರು(ತಾಂತ್ರಿಕ), ಸೆಸ್ಕ್, ನಿಗಮ ಕಾರ್ಯಾಲಯ ಮೈಸೂರು.
3. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ ಮಂಡ್ಯ.

ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

1. ಲೆಕ್ಕಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ವಿಭಾಗ ನಾಗಮಂಗಲ.
2. ಲೆಕ್ಕಾಧಿಕಾರಿ, (ಆಂಪ) ಚಾ.ವಿ.ಸ.ನಿ.ನಿ., ಪಾಂಡವಪುರ.
3. ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಉಪವಿಭಾಗ ನಾಗಮಂಗಲ.
4. ಶಾಖಾಧಿಕಾರಿ, ಚಾ.ವಿ.ಸ.ನಿ.ನಿ., ಕಾ ಮತ್ತು ಪಾ ಶಾಖೆ ನಾಗಮಮಗಲ/ದೇವಲಾಪುರ/ಚೀಣ್ಯ.
5. ಕಿಆಸ/ಮು.ಕ